C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆ:35-2024**

ಪ್ರಾಸಾ. 4 ಚಾಸಾ. 3

ಸಾಕ್ಷಿದಾರರ ಹೆಸರು ಶಂಕರ್

ತಂದೆಯ ಹೆಸರು ರಾಚಯ್ಯ

ವಯಸ್ಸು 38 ವರ್ಷಗಳು

ಉದ್ಯೋಗ ಚಾಲಕ

ವಾಸ ಉಪ್ಪಲಗೆರೆ ಕೊಪ್ಪಲು

ಸಾಕ್ಷಿಯನ್ನು ದಿನಾಂಕ: 23-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ . ಸಾಕ್ಷಿಯು ಗುರುತಿಸಿದ ನೋಟಿಸ್ ಅನ್ನು ನಿ.ಪಿ.5 ಎಂದು , ಸಾಕ್ಷಿಯು ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ . ಸಾಕ್ಷಿಯು ಗುರುತಿಸಿದ ಸ್ಥಳ ಮಹಜರ್ ಅನ್ನು ನಿ.ಪಿ.6 ಎಂದು , ಸಾಕ್ಷಿಯು ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಕಿರುಗಾವಲಿನ ಮೈಸೂರಿನ ರಸ್ತೆಯಲ್ಲಿ ಟೀ ಅಂಗಡಿ ಹತ್ತಿರ ಒಂದು ವರ್ಷದ ಹಿಂದೆ ಮಾಡಿರುತ್ತೇನೆ. ಪೋಲಿಸರು ಕೇಳಿದ ಕಾರಣ ಸದರಿ ಸಹಿಗಳನ್ನು ಮಾಡಿರುತ್ತೇನೆ. ಆಗ ಚಾಸಾ-5 ಇದ್ದರು , ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಪೊಲೀಸರು ನನ್ನ ಸಹಿಯನ್ನು ಪಡೆದರು ಗೊತ್ತಿಲ್ಲ. ಆಗ ಮಧ್ಯಾಹ್ನ 12.00 ಗಂಟೆ ಆಗಿತ್ತು. ಈಗ ತೋರಿಸಿದ ನಿ.ಪಿ.4 ರ ಪೊಟೋದಲ್ಲಿ ಕಾಣುವ ವಾಹನವನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ.

**2.** ಪಿ**.** ಎಫ್**. 15/2023** ರಲ್ಲಿ ಕ್ರಮ ಸಂಖ್ಯೆ **1** ರಿಂದ **3** ರಲ್ಲಿ ನಮೂದಿಸಿರುವ ವಸ್ತುಗಳನ್ನು ಇರಸಿದ ಸೀಲ್ ಮಾಡಿದ **3** ಚೀಲಗಳನ್ನು ಸಾಕ್ಷಿಗೆ ತೋರಿಸಲಾಯಿತು**.** ಚೀಲಗಳ ಮೇಲಿರುವ ಚೀಟಿಯಲ್ಲಿ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಟೀ ಅಂಗಡಿ ಬಳಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ**.** ಚೀಲದ ಒಳಗಡೆ ಏನು ವಸ್ತುಗಳು ಇವೆ ಎಂದು ಹೇಳಲು ಆಗುವುದಿಲ್ಲ**.** ಸದರಿ **3** ಚೀಲಗಳನ್ನು ತೆರೆದು **2** ಕುಷನ್ ಶೀಟ್ ತುಂಡುಗಳನ್ನು ಮತ್ತು ಒಂದು ಜೊತೆ ಚಪ್ಪಲಿಗಳನ್ನು ಸಾಕ್ಷಿಗೆ ತೋರಿಸಲಾಯಿತು**.** ಸದರಿ ವಸ್ತುಗಳನ್ನು ಸಾಕ್ಷಿಯು ಗುರುತಿಸಿರುವುದಿಲ್ಲ**.** ಸಾಕ್ಷಿಗೆ ತೋರಿಸಿರುವ ಕಾರಣಕ್ಕಾಗಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿ ಮೇರೆಗೆ ಸದರಿ ವಸ್ತುಗಳನ್ನು ಕ್ರಮವಾಗಿ ಮುದ್ದೆ ಮಾಲು **1** ರಿಂದ **3** ಎಂದು ಸದರಿ ಚೀಲಗಳ ಮತ್ತು ಚೀಟಿಗಳ ಸಹಿತವಾಗಿ ಗುರುತಿಸಲಾಯಿತು**.** ಸದರಿ ವಸ್ತುಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡರು**.** ನಿ**.**ಪಿ**. 5** ಮತ್ತು **6** ರಲ್ಲಿ ಏನು ಬರೆದಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ**.** ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ**.**

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿಸಲಾಯಿತು**. )**

## ಸರ್ಕಾರಿ ಅಭಿಯೋಜಕರಿಂದ ಪಾಟಿ ಸವಾಲುಃ

ಕಿರುಗಾವಲು ಪೋಲಿಸರು ಸ್ಥಳ ಮಹಜರ್ ಗೆ ಹಾಜರು ಇರುವಂತೆ ನನಗೂ ಮತ್ತು ಚಾಸಾ**–5** ರವರಿಗೆ ನೋಟಿಸ್ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ**.** ಸ್ಥಳದಲ್ಲಿ ಚಾಸಾ**–5** ಮತ್ತು ಕುಮಾರ್ ಎಂಬುವವರು ಇದ್ದರು ಎಂದರೆ ಸರಿಯಲ್ಲ**.** ಕಿರುಗಾವಲು ಸಂತೆಮಾಳದಲ್ಲಿರುವ ರಾಧಶ್ರೀ ಸರ್ವಿಸ್ ಸ್ಟೇಷನ್ ಹೆಚ್ ಪಿ ಪೆಟ್ರೋಲ್ ಬಂಕ್ ನ ಎಡಭಾಗದ ಪುಟ್ ಪಾತ್ ನಲ್ಲಿ ಚಾಸಾ**–1** ಸಿದ್ದಮೂರ್ತಿ ನಿ**.**ಪಿ**.4** ರಲ್ಲಿ ಕಾಣುವ ವಾಹನದಲ್ಲಿ ಮಲಗಿದ್ದಾಗ ಆರೋಪಿತರು ಬಸವರಾಜ ಮತ್ತು ಗೋವಿಂದರಾಜ ಎಂಬುವವರು ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಕಬ್ಬಿಣದ ರಾಡ್ ಮತ್ತು ರಿಪ್ಪಿಸ್ ಪಟ್ಟಿಯಿಂದ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದಾಗ ಪೊಲೀಸರು ಸದರಿ ವಾಹನವನ್ನು ಪರಿಶೀಲಿಸಿದಾಗ ಸಿದ್ದಮೂರ್ತಿ ಮಲಗಿದ ಕುಷನ್ ಸೀಟ್ ನಲ್ಲಿ ರಕ್ತ ಕಲೆಗಳು ಇದ್ದು**,** ಸ್ಥಳದಲ್ಲಿ ಚಪ್ಪಲಿ ಇದ್ದವು ಎಂದರೆ ಸರಿಯಲ್ಲ**.** ಪೊಲೀಸರು ಎಂ**.**ಓ **1** ರಿಂದ **3** ಅನ್ನು ಮತ್ತು ಸದರಿ ವಾಹನವನ್ನು ಮಹಜರಿ ಮೂಲಕ ವಶಪಡಿಸಿಕೊಂಡರು ಎಂದರೆ ಸರಿಯಲ್ಲ**.** ಈಗ ಓದಿ ಹೇಳಿದ ರೀತಿ ಪೋಲಿಸರಿಗೆ ನಾನು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ**.** ಸಾಕ್ಷಿಯ

ಹೇಳಿಕೆಯನ್ನು ನಿ.ಪಿ. 7 ಎಂದು ಗುರುತಿಸಲಾಯಿತು.ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಆರೋಪಿತರ ವಕೀಲರು ಪಾಟಿಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.